ಸಿವಿಲ್ ತರಫ್.

1884ನೇ ಇಸವಿ ಸೆಪ್ಟಂಬರ್ 15ನೇ ಮರಕುಂ ರೂಲ್ ಆಫ್ ಪ್ರಾಕ್ಟಿಸ್ ನಂಬರ್ 53.

1878ನೇ ಇಸವಿ ಮೇ 1ನೇ ಮರಕುಂ 1ನೇ ನಂಬರ್ ಸಿವಿಲ್ ರೂಲ್ ಆಫ್ ಪ್ರಾಕ್ಟಿಸ್‌ನಿಂದ ಕೊಡಲ್ಪಟ್ಟಿಯಿರುವ ಅನುಜ್ಞೆ
ನ್ನ ತಿದ್ದುಪಾಟು ಮಾಡಿ ಚೀಫ್ ಕೋರ್ಟಿನವರು ಹುಕುಂ ಮಾಡುವದೇನಂದರೆ, ಡಿಕ್ರೀ ಫೈಸಲಾಗುವವರಿಗೂ ನಡವಳಿಕೆಗಳನ್ನ ಚೆ
ಯಿಸುವದಕ್ಕೂ ಮತ್ತು ಕೋರ್ಟಿನಿಂದ ಮೊಬಲಗನ್ನ ತೆಗದುಕೊಳ್ಳುವದಕ್ಕೂ ಸಹ ಅಡ್ವೊಕೇಟ್ ಯಾ ಪ್ಲೀಡರಿಗೆ ಅಧಿಕಾರ ಕೊಡಲು
ಪವರ್ ಆಫ್ ಅಟ್ಟರ್ನೀ ಯಾನೆ ಮೊಖ್ತ್ಯಾರ್‌ನಾಮೆಗಳನ್ನ ರಿಕಾರ್ಡ್‌ವಿಲೆ ಯಾಗುವಾಗ್ಯೆ A ಫೈಲ್ ಕಾಗದಗಳ ಜೊತೆಯಲ್ಲಿ ಕಾಪಾಡಲ್ಪ

ಹುಕುಂ ಬಮೋಜೀಬ್,

ಎಸ್. ಹೇಮಾಜಿರಾವ್,

ರಿಜಿಸ್ಟ್ರಾರ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್‌ಜಡ್ಜ್‌ರ್‌ಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 235.

ಮೃತಪಟ್ಟ ಚಿಕ್ಕನರಸಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಅರಳೆಪ್ಯಾಟೆಗೆ ವಳಿತವಾದ ಮುದ್ವೀರಪ್ಪಟ್ಟಿ ಪೇಟೆ ವೆಂಗಟಮ್ಮನು, ಮೃತಪಟ್ಟ ಸದರಿ ಚಿಕ್ಕನರಸಪ್ಪನ
ವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ವೆಂಗಟ್ಟಮ್ಮನವರು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಚಿಕ್ಕ
ನರಸಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್
ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಗಟಮ್ಮನವರ ಅರ್ಜೀಯನ್ನು 1884ನೇ ಇಸವಿ ನವಂಬರ್ ತಿಂಗಳು ತಾರೀಖು 20ರಲ್ಲು
ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕನರಸಪ್ಪನವರ ಆಸ್ತಿಗೆ
ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅಕ್ಟೋಬರ್ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನನ್ಮ್ಯ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 227.

ಮೃತಪಟ್ಟ ಶಾ|| ವೆಂಕಟರಾಮಯ್ಯನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು ಚಿಕ್ಕನಾಯಕನಹಳ್ಳಿ ಕಸಬಾದ ಗಂಡಸಿ ನರಸಪ್ಪನವರ ಮಗ ಹಿರಿಯಂಣಪ್ಪ, ಮೃತಪಟ್ಟ ಸದರೀ ಶಾ|| ವೆಂ
ಕಟರಾಮಯ್ಯನವರಿಗೆ ಅಳಿಯನಾಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕನಾಯಕನಹಳ್ಳಿ ಕಸಬಾ ಸ್ಥಳದ ಹಿರಿಯಂಣಪ್ಪನವರು ಚಿಕ್ಕ
ನಾಯಕನಹಳ್ಳಿ ವಾಸಸ್ಥರಾಗಿ ಮೃತಪಟ್ಟ ಶಾ|| ವೆಂಕಟರಾಮಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸೂಲಗಳನ್ನು ವಸೂಲ್ ಮಾಡು
ವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹಿರಿಯಂಣಪ್ಪನವರ ಅರ್ಜಿಯನ್ನು 1884ನೇ ಇಸವಿ ನವಂಬರ್ ತಿಂಗಳು ತಾರೀಖು 13ರಲ್ಲು ಕೇಳಿ
ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಾಮಯ್ಯನವರ ಆಸ್ತಿಗೆ
ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅಕ್ಟೋಬರ್ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನನ್ಮ್ಯದಸ್ತಖತ್ತೊಡನೆ ಕೊಡೋಣಾಗಿದೆ.